

## ಹೊಂಬುಜ ಮಠದಲ್ಲಿ ಮುಷ್ಠಿ ದಾನ

ಅನ್ನದಾನಕ್ಕಿಂತ ಬೇರೆ ದಾನ ಮತ್ತೊಂದಿಲ್ಲವೆಂದು ಅನೇಕರ ಮಾತು. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಹುಂಚದ ಹೊಂಬುಜ ಜೈನ ಮಠದಲ್ಲೊಂದು ವಿಶಿಷ್ಟ ದಾನ ನೀಡುವ ಪರಂಪರೆ ಇದೆ. ಇಲ್ಲಿನ ಮಠದಲ್ಲಿರುವ ದಾಸೋಹ ಭವನದಲ್ಲಿ ಒಂದು ಕಡೆಯಲ್ಲಿ ಅಕ್ಕಿಯನ್ನು ಹಾಕಿದ ಕೊಳಗವಿದೆ.

ಅದರಲ್ಲಿದ್ದ ಒಂದು ಚಟಾಕದಿಂದ (ಅಳತೆ ಮಾಪನ) ಒಂದು ಮುಷ್ಠಿಯಷ್ಟು ಅಕ್ಕಿಯನ್ನು ಮತ್ತೊಂದು ಕೊಳಗಕ್ಕೆ ಸುರಿಯಬೇಕು. ಅದನ್ನು ದಾನವೆಂದು ಪರಿಗಣಿಸುತ್ತಾರೆ. ಅದಕ್ಕೆ 10 ರೂಗಳನ್ನು ಸ್ವೀಕರಿಸಿ, ರಶೀದಿಯನ್ನು ನೀಡುತ್ತಾರೆ. ಅಲ್ಲಿ ದಾನ ಮಾಡಿದವರ ಅಕ್ಕಿಯನ್ನು ನಿತ್ಯ ಪ್ರಸಾದಕ್ಕೆ ವಿನಿಯೋಗಿಸಲಾಗುತ್ತದೆ. ಈ ವಿಶಿಷ್ಟ ದಾನವನ್ನು 'ಮುಷ್ಠಿದಾನ'ವೆಂದು ಕರೆಯುತ್ತಾರೆ.

—ಡಾ.ಮಲ್ಲಿಕಾರ್ಜುನ ಕುಂಬಾರ, ಗಜೇಂದ್ರಗಡ



## ತಾಳೆಗರಿಯ ಮರ

ಚಿತ್ರದಲ್ಲಿ ಕಾಣುತ್ತಿರುವುದು ತಾಳೆಗರಿಯ ಮರ. ಹಿಂದೆಲ್ಲಾ ಈ ತಾಳೆಗರಿಯ ಮೇಲೆಯೇ ಬರೆಯುತ್ತಿದ್ದರು. ಅದನ್ನು ತಾಳೆಗರಿಯ ಓಲೆ ಎಂದೇ ಪ್ರಸಿದ್ಧವಾಗಿತ್ತು. ಈ ಮರ ಇರುವುದು ಹಿಮಾಲಯದಲ್ಲಿ ಪ್ರಸಿದ್ಧ ಚಾರುಧಾಮ್ ಯಾತ್ರೆಯಲ್ಲಿ ಬದರಿ ನಂತರ ಸತೋಫನ್‌ಗೆ ಹೋಗುವ ದಾರಿಯಲ್ಲಿದೆ. ಅಂದರೆ ಪಾಂಡವರು ಸ್ವರ್ಗಾರೋಹಣ ಮಾಡಿದ ಸ್ಥಳಕ್ಕೆ ಹೋಗುವ ಮಾರ್ಗದಲ್ಲಿದೆ. ಬೇರೆ ಕಡೆನೂ ಇರಬಹುದು; ನಾವು ನೋಡಿದ್ದು ಇಲ್ಲಿ. ಆ ಕಡೆ ಹೋದರೆ ಮರೆಯದೆ ತಾಳೆಗರಿಯ ಮರಗಳನ್ನು ನೋಡಿಕೊಂಡು ಬನ್ನಿ. ಅಲ್ಲಿ ವಾಸಿಸುತ್ತಿರುವ ಸ್ಥಳೀಯರ ಸಹಾಯ, ಮಾರ್ಗದರ್ಶನ ಪಡೆಯಬಹುದು. ಅವರು ಬಹು ಸಂತೋಷದಿದ ಪ್ರತಿಯೊಂದನ್ನು ವಿವರಿಸಿ ಹೇಳುತ್ತಾರೆ.

—ಶಶಿರೇಖಾ ನಾಗೇಂದ್ರ, ಕುಣಿಗಲ್

## ಪ್ರಕೃತಿಯ ವಿಸ್ಮಯ ಕಲಾಕೃತಿ

ಗಿಡ, ಮರ ಬಳ್ಳಿಗಳಲ್ಲಿ ನಾವು ಆರಾಧಿಸುವ ದೇವರ ಪ್ರತಿರೂಪಗಳು ಸೃಷ್ಟಿಯಾಗಿರುವುದನ್ನು ಹಲವೆಡೆ ಕಾಣುತ್ತೇವೆ. ಇದಕ್ಕೆ ಮತ್ತೊಂದು ಸಾಕ್ಷಿಯೆಂಬಂತೆ ಹೊಳಲ್ಕೆರೆ ಹೊಸದುರ್ಗದ ಮಧ್ಯೆ ಬರುವ ಹೇರೂರಿನ ಹತ್ತಿರದ ರಸ್ತೆಬದಿಯ ಒಂದು ಬೇವಿನ ಮರದ ಕಾಂಡದಲ್ಲಿ ಗಣೇಶ ಕಲಾಕೃತಿಯು ಮೂಡಿದ್ದು ನೋಡುಗರ ಮನದಲ್ಲಿ ವಿಸ್ಮಯ ಮೂಡಿಸುತ್ತದೆ. ಪ್ರಕೃತಿಯ ಈ ಸುಂದರ ಕಲಾಕೃತಿಯು ಈ ರಸ್ತೆಯಲ್ಲಿ ಹಾದು ಹೋಗುವ ಜನರನ್ನು ಆಕರ್ಷಿಸುತ್ತಿದೆ.

—ಪ. ಚಂದ್ರಕುಮಾರ, ಗೌನಹಳ್ಳಿ



ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ. ಜೊತೆಗೊಂದು ಚೆಂದದ ಚಿತ್ರ ಇರಲೇಬೇಕು.

ಇಮೇಲ್ ವಿಳಾಸ:
editorsu@sudha.co.in